**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2264 |
| ಸದಸ್ಯರ ಹೆಸರು | : | ಶ್ರೀ. ಎನ್. ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21.03.2022 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ ಪ್ರಶ್ನೆ ಪತ್ರಿಕೆ ಮುದ್ರಣದಲ್ಲಿ ರೂಪಾಯಿ 9 ಕೋಟಿಗಳಿಗೂ ಹೆಚ್ಚು ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಆ) | ಗೌಪ್ಯ ವೆಚ್ಚ ಎಂಬ ಹೆಸರಿನಲ್ಲಿ ಯಾವುದೇ ಪೂರಕ ಬಿಲ್ಲುಗಳನ್ನು ಸಲ್ಲಿಸದೇ ರೂಪಾಯಿ 9 ಕೋಟಿಗೂ ಅಧಿಕ ಮೊತ್ತವನ್ನು ಯಾವ ಕಾರಣಗಳಿಗಾಗಿ ವೆಚ್ಚ ಮಾಡಲಾಯಿತು; ಈ ಮೊತ್ತವನ್ನು ವೆಚ್ಚ ಮಾಡಿದ ಅಧಿಕಾರಿಗಳು ಯಾರ್ಯಾರು?(ಹೆಸರು ಮತ್ತು ಹುದ್ದೆಯೊಂದಿಗೆ ವಿವರ ನೀಡುವುದು) | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ 1966 ರನ್ವಯ ಮಂಡಳಿಯ ಉದ್ದೇಶವು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ನಡೆಸುವುದಾಗಿರುತ್ತದೆ. ನಿರ್ದೇಶಕರು(ಪರೀಕ್ಷೆಗಳು) ರವರು ಮಂಡಳಿಯ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಪರೀಕ್ಷಾ ಕಾರ್ಯಗಳನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ 1966 ಚಾಪ್ಟರ್-8 ನಿಯಮ 60ರಲ್ಲಿ ಕೆಳಕಂಡಂತೆ ವಿವರಿಸಲಾಗಿದೆ.<br><br>"60. Procurements in printing of question papers: The provisions of the Karnataka Transparency in Public Procurements Act, 1999 shall not apply to the procurements of printing of Question Papers of SSLC Examination and other 18 Examinations as per the Notification No.PWD57 FC-3/2002,DATED 06-03-2002 PUBLISHED IN THE Karnataka Gazette dated: 07-03-2002 Part-4A Extra ordinary No.274.<br><br>ಕರ್ನಾಟಕ ಸರ್ಕಾರದ The Manual Of Contigent Expenditure 1958 ರ ನಿಯಮ47(5) ರಲ್ಲಿ The Accounts of secret service expenditure will not be subjected to scrutiny by the audit authority ಎಂಬುದಾಗಿರುತ್ತದೆ.<br><br>ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ The Manual Of Contingent Expenditure 1958 ರ ನಿಯಮದ ಕಂಡಿಕೆ 48(iv) ರಂತೆ ಕ್ರಮವಹಿಸಲಾಗಿದೆ.<br><br>ಮೇಲ್ಕಂಡ ಆದೇಶ ಹಾಗೂ ನಿಯಮಗಳನ್ವಯ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಮುದ್ರಣ, ಸರಬರಾಜು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲಾಗಿದೆ. ಈ ಕಾರ್ಯವು ಗೌಪ್ಯ ಕಾರ್ಯವಾಗಿರುತ್ತದೆ. ಸದರಿ ಮುದ್ರಣ ವೆಚ್ಚವು ಆಯಾ ಸಂದರ್ಭಕ್ಕೆ ಅನುಗುಣವಾಗಿರುತ್ತದೆ. ಪರೀಕ್ಷಾ ಮಂಡಳಿಯ ನಿರ್ದೇಶಕರು ಮೇಲೆ ವಿವರಿಸಿದ ನಿಯಮಗಳನ್ವಯ ತಮಗೆ ಪ್ರದತ್ತವಾದ ಅಧಿಕಾರದಿಂದ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ನಿರ್ವಹಣೆ ಮಾಡಿರುತ್ತಾರೆ.<br><br>2020-21ನೇ ಸಾಲಿನ ಪರೀಕ್ಷೆಗಳನ್ನು ನಡೆಸುವ ಅವಧಿಯಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕರಾಗಿ ಶ್ರೀಮತಿ ಸುಮಂಗಲ ವಿ. ರವರು ಕಾರ್ಯ ನಿರ್ವಹಿಸಿರುತ್ತಾರೆ. |

ಸಂಖ್ಯೆ: ಇಪಿ 65 ಎಸ್ಎಲ್‌ಬಿ 2022

(ಬಿ.ಸಿ ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು